**2013ರ ಕರ್ನಾಟಕ ಅಧಿನಿಯಮ ಸಂಖ್ಯೆ: 19**

# ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ, 2012

**ಪ್ರಕರಣಗಳ ಪಟ್ಟಿ**

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**ಪ್ರಕರಣಗಳು:**

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ದಿನಗೂಲಿ ನೌಕರನ ಮುಂದುವರಿಕೆ
4. ಸೇವೆಯಲ್ಲಿ ಮುಂದುವರೆದ ದಿನಗೂಲಿ ನೌಕರರ ವೇತನ, ರಜೆ ಮತ್ತು ಸೇವಾಂತ ಲಾಭಗಳು
5. ನಡತೆ ಮತ್ತು ಶಿಸ್ತು
6. ದುರ್ವರ್ತನೆಗಾಗಿ ಕೊನೆಗೊಳಿಸುವುದು
7. ಅಪೀಲು
8. ಸದ್ಭಾವನೆಯಲ್ಲಿ ಕೈಗೊಂಡ ಕ್ರಮದ ರಕ್ಷಣೆ
9. ಸಿವಿಲ್ ನ್ಯಾಯಾಲಯವು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದಿಲ್ಲ
10. ತೊಂದರೆಯ ನಿವಾರಣಾ ಅಧಿಕಾರ
11. ನಿಯಮಗಳ ರಚನಾಧಿಕಾರ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**2013ರ ಅಧಿನಿಯಮ ಸಂಖ್ಯೆ 19.–** ವಿವಿಧ ಸಂಸ್ಥೆಗಳಲ್ಲಿ ಹತ್ತು ವರ್ಷಗಳಿಗಿಂತ ಹೆಚ್ಚಾಗಿ ಕಾರ್ಯನಿರ್ವಹಿಸಿದ ದಿನಗೂಲಿ ನೌಕರರ ಉತ್ತಮ ಕ್ಷೇಮಾಭಿವೃದ್ಧಿಗಾಗಿ ಮತ್ತು ದೀರ್ಘ ಸಾರ್ವಜನಿಕ ಸೇವೆಯನ್ನು ಕೊನೆಗೊಳಿಸಿದ ಮೇಲೆ ಕನಿಷ್ಠ ಸೇವಾವಧಿ ಭದ್ರತೆ, ಉತ್ತಮ ಮಜೂರಿ ಮತ್ತು ಕೆಲವು ಸಾಮಾಜಿಕ ಭದ್ರತೆಯನ್ನು ಅವರಿಗೆ ನೀಡುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

(2012ರ ವಿಧಾನಪರಿಷತ್ತಿನ ವಿಧೇಯಕ ಸಂಖ್ಯೆ:04, ಕಡತ ಸಂಖ್ಯೆ:ಸಂವ್ಯಶಾಇ 77 ಶಾಸನ 2012)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 5 ಹಾಗೂ 41ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

---

**2013ರ ಕರ್ನಾಟಕ ಅಧಿನಿಯಮ ಸಂಖ್ಯೆ: 19**

(2013ರ ಫೆಬ್ರವರಿ ಹದಿನೈದನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ, 2012

(2013ರ ಫೆಬ್ರವರಿ ಹದಿನ್ನಾಲನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ರಾಜ್ಯದಲ್ಲಿನ ವಿವಿಧ ಸಂಸ್ಥೆಗಳಲ್ಲಿ ಹತ್ತು ವರ್ಷಗಳಿಗಿಂತ ಹೆಚ್ಚಿನ ಅವಧಿಯಿಂದ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿಗಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ವಿವಿಧ ಸಂಸ್ಥೆಗಳಲ್ಲಿ ಹತ್ತು ವರ್ಷಗಳಿಗಿಂತ ಹೆಚ್ಚಿನ ಅವಧಿಯಿಂದ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿಗೆ ಮತ್ತು ಸೇವಾವಧಿಯ ಕನಿಷ್ಠ ಭದ್ರತೆ, ಉತ್ತಮ ವೇತನ ಮತ್ತು ದೀರ್ಘಾವಧಿಯ ಸರ್ಕಾರಿ ಸೇವೆಯನ್ನು ಕೊನೆಗೊಳಿಸಿರುವವರಿಗೆ ಕೆಲವು ಸಾಮಾಜಿಕ ಭದ್ರತೆಯನ್ನು ನೀಡುವುದಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಆನುಷಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ ;

ಇದು ಭಾರತ ಗಣರಾಜ್ಯದ ಅರವತ್ತೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ :-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ, 2012 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ದಿನಗೂಲಿ ನೌಕರ" ಎಂದರೆ, 2006ರ ಏಪ್ರಿಲ್ 10 ರಂದು ದಿನಗೂಲಿ ನೌಕರನಂತೆ ಹತ್ತು ವರ್ಷಗಳಿಗಿಂತ ಕಡಿಮೆಯಿರದಂತೆ ಕಾರ್ಯನಿರ್ವಹಿಸಿ ಸೇವೆಯನ್ನು ಪೂರ್ಣಗೊಳಿಸಿದಂಥ ಮತ್ತು ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ದಿನಗೂಲಿಯ ಆಧಾರದ ಮೇಲೆ ಸರ್ಕಾರ ಅಥವಾ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರತನಾಗಿರುವ ನೌಕರ;

(ಬಿ) "ಸರ್ಕಾರ" ಎಂದರೆ ಕರ್ನಾಟಕ ಸರ್ಕಾರ;

(ಸಿ) "ಸಂಸ್ಥೆ" ಎಂದರೆ ಸರ್ಕಾರದಲ್ಲಿ ಅಥವಾ ಯಾವುದೇ ಸ್ಥಳೀಯ ನಿಕಾಯಗಳಲ್ಲಿನ ಸಂಸ್ಥೆ ;

(ಡಿ) "ಸ್ಥಳೀಯ ಸಂಸ್ಥೆಗಳು" ಎಂದರೆ ಶಾಸನಾತ್ಮಕ ಅಥವಾ ಶಾಸನಾತ್ಮಕವಲ್ಲದ ಪ್ರಾಧಿಕಾರಗಳು ಅಥವಾ ಮಂಡಳಿಗಳು ಮತ್ತು ಸರ್ಕಾರಿ ಉದ್ಯಮಗಳು ಒಳಗೊಂಡಂತೆ ಸರ್ಕಾರದಿಂದ ಮತ್ತು ನಿಗಮಗಳಿಂದ ಕಾನೂನಿನ ಮೂಲಕ ಸ್ಥಾಪಿತವಾದ ವಿವಿಧ ಸ್ಥಳೀಯ ಸ್ವಯಂ ಆಡಳಿತಗಳು, ಪಂಚಾಯತಿಗಳು ಮತ್ತು ಪೌರ ಸಂಸ್ಥೆಗಳು.

**3. ದಿನಗೂಲಿ ನೌಕರನ ಮುಂದುವರಿಕೆ.-** (1) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಈ ಅಧಿನಿಯಮದ ಅಡಿಯಲ್ಲಿ ಸರ್ಕಾರವು ಅಧಿಸೂಚಿಸಿದ ಹೆಸರಿನ ದಿನಗೂಲಿ ನೌಕರರು, ಅವರಿಗೆ ಅರವತ್ತು ವರ್ಷಗಳ ವಯಸ್ಸು ಪೂರ್ಣವಾಗುವವರೆಗೂ ದಿನಗೂಲಿ ಆಧಾರದ ಮೇಲೆ ಮುಂದುವರೆಯತಕ್ಕದ್ದು:

ಪರಂತು ಯಾವೊಬ್ಬ ದಿನಗೂಲಿ ನೌಕರನು, ದಿನಗೂಲಿ ಆಧಾರದ ಮೇಲೆ ಆತನು ಪ್ರಥಮವಾಗಿ ನೇಮಕವಾದ ದಿನಾಂಕದಂದು ಹುದ್ದೆಗಾಗಿನ ನಿಯಮಿಸಲಾದ ಅರ್ಹತೆಯನ್ನು ಹೊಂದಿಲ್ಲದಿದ್ದರೆ ಆತನನ್ನು ಮುಂದುವರೆಸತಕ್ಕದ್ದಲ್ಲ.

(2) ರಾಜ್ಯ ಸರ್ಕಾರವು ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಒಂದು ವರ್ಷದ ಒಳಗಾಗಿ (1)ನೇ ಉಪಪ್ರಕರಣದ ಉದ್ದೇಶಕ್ಕಾಗಿ ಎಲ್ಲಾ ಸಂಸ್ಥೆಗಳ ಅರ್ಹ ದಿನಗೂಲಿ ನೌಕರರ ಹೆಸರುಗಳನ್ನು ಅಧಿಸೂಚಿಸತಕ್ಕದ್ದು.

**4. ಸೇವೆಯಲ್ಲಿ ಮುಂದುವರೆದ ದಿನಗೂಲಿ ನೌಕರರ ವೇತನ, ರಜೆ ಮತ್ತು ಸೇವಾಂತ ಲಾಭಗಳು.-** (1) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ 1978ರಲ್ಲಿ (1990ರ ಕರ್ನಾಟಕ ಅಧಿನಿಯಮ 14) ಕರ್ನಾಟಕ ಸಿವಿಲ್ ಸೇವಾ ನಿಯಮಗಳಲ್ಲಿ ಅಥವಾ ಸದರಿ ಅಧಿನಿಯಮದ ಅಡಿಯಲ್ಲಿ ಮಾಡಲಾದ ಅಥವಾ ಮಾಡಲಾಗಿದೆ ಎಂದು ಭಾವಿಸಲಾದ ಸರ್ಕಾರಿ ನೌಕರರ ಸೇವಾ ಷರತ್ತುಗಳನ್ನು ನಿಯಂತ್ರಿಸುವ ಯಾವುದೇ ಇತರ ನಿಯಮಗಳಲ್ಲಿ ಏನೇ ಇದ್ದರು, ದಿನಗೂಲಿ ನೌಕರನ ವೇತನವು, ಆತನು ಮುಂದುವರೆಸಿದ ಸೇವೆಯಲ್ಲಿನ ಹುದ್ದೆಯ ಕಾಲಶ್ರೇಣಿ ವೇತನದ ಕನಿಷ್ಠವಾಗಿರತಕ್ಕದ್ದು. ಆತನಿಗೆ ಅರ್ಹವಾದ ತುಟ್ಟಿಭತ್ಯೆ ಮತ್ತು ಮನೆಬಾಡಿಗೆ ಭತ್ಯೆಯನ್ನು ಸರ್ಕಾರವು ಕಾಲಕಾಲಕ್ಕೆ ಆದೇಶದ ಮೂಲಕ

ನಿರ್ಧರಿಸಬಹುದಾದಂತೆ ಆತನಿಗೆ ಸಂದಾಯ ಮಾಡತಕ್ಕದ್ದು. ಒಬ್ಬ ದಿನಗೂಲಿ ನೌಕರನು ವರ್ಷಕ್ಕೆ ಎಲ್ಲಾ ಸಾರ್ವತ್ರಿಕ ರಜೆಗಳು, ಹದಿನೈದು ದಿನಗಳ ಸಾಂಧರ್ಬಿಕ ರಜೆಗಳು ಮತ್ತು ಮೂವತ್ತು ದಿನಗಳ ಗಳಿಕೆ ರಜೆಗೆ ಅರ್ಹನಾಗಿರತಕ್ಕದ್ದು. ಸರ್ಕಾರಿ ಆದೇಶದ ಮೂಲಕ ನಿರ್ಧರಿಸಬಹುದಾದ ಅವಧಿಯ ಅಂಥ ಅಂತರದಲ್ಲಿ ದಿನಗೂಲಿ ನೌಕರನಿಗೆ ಆತನ ವೇತನವನ್ನು ಹೆಚ್ಚು ಮಾಡಬಹುದು.

(2) ಆತನಿಗೆ ಅರವತ್ತು ವರ್ಷಗಳ ವಯಸ್ಸಾದ ತರುವಾಯ ದಿನಗೂಲಿ ನೌಕರನಾಗಿ ಮುಂದುವರೆಯುವುದನ್ನು ನಿಲ್ಲಿಸಿದಾಗ, ಸರ್ಕಾರವು, ಕಾಲಕಾಲಕ್ಕೆ ನಿರ್ಧರಿಸಬಹುದಾದಂತೆ ಮತ್ತು ಅಧಿಸೂಚಿಸಬಹುದಾದಂತೆ ಅಂಥ ಸೇವಾಂತ ಲಾಭಗಳು ಅಥವಾ ಎಕ್ಸ್‌ಗ್ರೇಷಿಯಕ್ಕೆ (ಅನುಗ್ರಹ ಪೂರ್ವಕ) ಆತನು ಅರ್ಹನಾಗತಕ್ಕದ್ದು.

**5. ನಡತೆ ಮತ್ತು ಶಿಸ್ತು.–** ಕರ್ನಾಟಕ ನಾಗರೀಕ ಸೇವೆಗಳ (ನಡತೆ) ನಿಯಮಗಳು 1966ರ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ದಿನಗೂಲಿ ನೌಕರನಿಗೆ ಅನ್ವಯವಾಗತಕ್ಕದ್ದು ಮತ್ತು ನಿಯಮಿಸಬಹುದಾದ ಅಂಥ ಕಾರ್ಯವಿಧಾನವನ್ನು ಅನುಸರಿಸಿದ ತರುವಾಯ ಆತನು, ಕೆಲಸದಿಂದ ತೆಗೆದುಹಾಕುವುದು ಒಳಗೊಂಡಂತೆ ಅಂಥ ಶಿಸ್ತು ಕ್ರಮಕ್ಕೆ ಹೊಣೆಗಾರನಾಗತಕ್ಕದ್ದು.

**6. ದುರ್ವರ್ತನೆಗಾಗಿ ಕೊನೆಗೊಳಿಸುವುದು.–** ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಮುಂದುವರೆದ ಒಬ್ಬ ದಿನಗೂಲಿ ನೌಕರನ ಸೇವೆಗಳನ್ನು ಯಾವುದೇ ದುರ್ನಡತೆಗಾಗಿ ಕೊನೆಗೊಳಿಸುವ ಯಾವುದೇ ಆದೇಶವನ್ನು ಅಂಥ ನೌಕರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡಿದ ತರುವಾಯ ಕ್ಷಿಪ್ರ ವಿಚಾರಣೆಯನ್ನು ನಡೆಸದ ಹೊರತು ಸಕ್ಷಮ ಪ್ರಾಧಿಕಾರವು ಹೊರಡಿಸತಕ್ಕದ್ದಲ್ಲ.

**7. ಅಪೀಲು.–** (1) ಯಾವೊಬ್ಬ ಅಧಿಕಾರಿ ಅಥವಾ ಪ್ರಾಧಿಕಾರದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು,–

(i) ಸರ್ಕಾರಿ ಸಂಸ್ಥೆಯಲ್ಲಿನ ದಿನಗೂಲಿ ನೌಕರನ ಸಂದರ್ಭದಲ್ಲಿ ಸರ್ಕಾರಕ್ಕೆ ;

(ii) ಸರ್ಕಾರಿ ಸಂಸ್ಥೆಯನ್ನು ಹೊರತುಪಡಿಸಿದ ಸಂಸ್ಥೆಯಲ್ಲಿ ದಿನಗೂಲಿ ನೌಕರನಾದ ಸಂದರ್ಭದಲ್ಲಿ ಸಂಸ್ಥೆಯ ಮುಖ್ಯಸ್ಥನಿಗೆ,

– ಅಪೀಲು ಮಾಡಬಹುದು.

(2) ಸರ್ಕಾರವು ಅಥವಾ ಸಂದರ್ಭಾನುಸಾರವಾಗಿ ಸಂಸ್ಥೆಯ ಮುಖ್ಯಸ್ಥನು, ಬಾಧಿತರಿಂದ ಅಹವಾಲನ್ನು ಕೇಳಿದ ತರುವಾಯ, ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ಆದೇಶಗಳನ್ನು ಹೊರಡಿಸತಕ್ಕದ್ದು ಮತ್ತು ಅದು ಅಂತಿಮವಾಗಿರತಕ್ಕದ್ದು.

**8. ಸದ್ಭಾವನೆಯಲ್ಲಿ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಲಾದ ಯಾವುದೇ ಕ್ರಮದ ಬಗ್ಗೆ ಸರ್ಕಾರದ ಯಾವೊಬ್ಬ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಕೈಗೊಳ್ಳಲು ಅವಕಾಶವಿರತಕ್ಕದ್ದಲ್ಲ.

**9. ಸಿವಿಲ್ ನ್ಯಾಯಾಲಯವು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದಿಲ್ಲ.–** ಈ ಅಧಿನಿಯಮದ ಉಪಬಂಧಗಳಿಂದ ಉದ್ಭವವಾಗುವ ವಿಲೀನಗೊಳಿಸುವಿಕೆ ಅಥವಾ ಮುಂದುವರಿಕೆಯ ಯಾವುದೇ ಕ್ಲೇಮಿನ ಸಂಬಂಧದಲ್ಲಿ ಯಾವುದೇ ದಾವೆ ಅಥವಾ ವ್ಯವಹರಣೆಯನ್ನು ಯಾವುದೇ ಸಿವಿಲ್ ನ್ಯಾಯಾಲಯವು ಪುರಸ್ಕರಿಸತಕ್ಕದ್ದಲ್ಲ.

**10. ತೊಂದರೆಯ ನಿವಾರಣಾ ಅಧಿಕಾರ.–** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದಲ್ಲಿ, ಸರ್ಕಾರವು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ತೊಂದರೆಯನ್ನು ನಿವಾರಿಸಲು ಅವಶ್ಯ ಅಥವಾ ಯುಕ್ತವೆಂದು ಭಾವಿಸುವ ಅಂಥ ಉಪಬಂಧಗಳನ್ನು ರಚಿಸಬಹುದು.

**11. ನಿಯಮಗಳ ರಚನಾಧಿಕಾರ.–** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ, ಅಧಿಸೂಚನೆಯ ಮೂಲಕ ಮತ್ತು ಪೂರ್ವಪ್ರಕಟಣೆ ನೀಡಿದ ತರುವಾಯ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು ಅಥವಾ ಹೊರಡಿಸಿದ ಅಧಿಸೂಚನೆಯನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನ ಅಥವಾ ಎರಡು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ

ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು, ವಿಧಾನಮಂಡಲದ ಉಭಯ ಸದನಗಳು ನಿಯಮದಲ್ಲಿ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟುಮಾಡಬೇಕೆಂದು ಒಪ್ಪಿದರೆ ಅಥವಾ ಯಾವುದೇ ನಿಯಮವನ್ನು ಅಥವಾ ಅಧಿಸೂಚನೆಯನ್ನು ರಚಿಸಬಾರದೆಂದು ತೀರ್ಮಾನಿಸಿದರೆ, ಆ ತರುವಾಯ ಅಂಥ ನಿಯಮವು ಅಥವಾ ಅಧಿಸೂಚನೆಯು ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಅಥವಾ ಅಧಿಸೂಚನೆಯ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದೇ ಕಾರ್ಯಕ್ಕೂ ಬಾಧಕವಾಗತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಜಿ.ಕೆ. ಬೋರೇಗೌಡ**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ

**ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) (1000 ಪ್ರತಿಗಳು)**